ಅಭಿ ತುಂಬಾ ಬದಲಾಗಿದ್ದಾನೆ. ನಂಜತೆ ಸರಿಯಾಗಿ ಮಾತೂ ಆಡಲ್ಲ. ರಾತ್ರಿ ಊಟಕ್ಕೆ ಕೂತಾಗಲೂ ಅಷ್ಟೇ. ಆಮೇಲೆ ಮೊಬೈಲ್‌ನಲ್ಲಿ ಸಿನಿಮಾ ನೋಡ್ತಾ ಹಾಗೇ ಮಲಗ್ತಾನೆ. ಮಾತಿಲ್ಲ,ಕತೆ ಇಲ್ಲ. ಸೆಕ್ಸ್ ಬೇಕು ಅಂತಲೂ ಅವನಿಗೆ ಅನ್ನಿಸ್ತಿಲ್ಲ...'

'ಸಾರಿ, ನಿನ್ನ ಬೆಳಗಿನ ನಿದ್ದೆ ಹಾಳು ಮಾಡಿದೆ. ನನ್ನ ಗೋಳು ಹೇಳ್ತಾ ಹೋದ್ರೆ ಅದು ಮುಗಿಯೋದಿಲ್ಲ. ಅಭಿಯನ್ನು ಮದುವೆಯಾಗಿ ತಪ್ಪು ಮಾಡ್ದೆ ಅನ್ನಿಸ್ತಿದೆ ಸಿದ್ಧಾರ್ಥ್. ನಿಂಗೆ ಹೇಳಬೇಕು ಅನ್ನಿಸ್ತು. ಅದಕ್ಕೇ ಫೋನ್ ಮಾಡಿದೆ' ಎನ್ನುತ್ತ, 'ಇವತ್ತು ರಜೆ ಹಾಕ್ತೀನಿ. ಎಲ್ಲಿಗೂ ಹೋಗೋಕೆ ಮೂಡಿಲ್ಲ' ಎಂದು ಹೇಳಿ ಫೋನ್ ಕಟ್ ಮಾಡಿಕೊಂಡಳು.

ಇನ್ನು ನಿದ್ದೆ ಬರಲ್ಲ ಅನ್ನಿಸಿ ಎದ್ದು ಬಾಲ್ಕನಿಗೆ ಬಂದು ನಿಂತ. ಸಿಟಿ ಆಗತಾನೇ ಎದ್ದು ಆಕಳಿಸುತ್ತಿತ್ತು. ಏರ್‌ಪೋರ್ಟ್ ರಸ್ತೆ ರಾತ್ರಿ ಮಲಗಿಲ್ಲ ಅನ್ನಿಸಿತು. ಇನ್ನರ್ಧ ಗಂಟೆ ಕಳೆಯುವಷ್ಟರಲ್ಲಿ ಬಸ್ಸು, ಕಾರು, ಆಟೋ, ಟೂ ವೀಲರ್, ಸ್ಕೂಲ್‌ಬಸ್‌ಗಳ ಓಡಾಟ ಶುರುವಾಗುತ್ತೆ ಅಂದುಕೊಂಡ. ಅವನು ನಿತ್ಯ ನೋಡುವ ದೃಶ್ಯ ಅದು. ಜ್ಯೂಬಿಲಿ ಹೈಟ್ಸ್‌ನ ಎಂಟನೇ ಫ್ಲೋರಿನ ಅಪಾರ್ಟ್‌ಮೆಂಟಿಗೆ ಸಿದ್ಧಾರ್ಥ ಬಂದು ಸೇರಿಕೊಂಡು ಏಳು ವರ್ಷಗಳಾಗಿವೆ. ನಿತ್ಯ ಎದ್ದ ಕೂಡಲೇ ಬಾಲ್ಕನಿಗೆ ಬಂದು ಹತ್ತು ನಿಮಿಷ ನಿಲ್ಲುವುದು ಅವನ ಅಭ್ಯಾಸ. ಹೀಗೆ ನಿಂತು ನೋಡುತ್ತಲೇ ನಾನು ಮುದುಕನಾಗಿಬಿಡ್ತೀನಿ ಅಂತ ಅವನಿಗೆ ಅನೇಕ ಸಲ ಅನ್ನಿಸಿದೆ.

ಅಭಿರಾಮ್ ಎಲ್ಲಿಗೆ ಹೋಗಿರಬಹುದು? ಕಾರನ್ನು ಎಲ್ಲಾದರೂ ಪಾರ್ಕ್ ಮಾಡಿ ಊಟಿಗೆ ಹೋಗಿರಬಹುದೇ? ಒಂಬತ್ತು ಗಂಟೆ ಹೊತ್ತಿಗೆ ಅರುಂಧತಿಗೆ ಫೋನ್ ಮಾಡಿ ವಿಚಾರಿಸಬೇಕು ಅಂದುಕೊಳ್ಳುತ್ತ ಒಳಕ್ಕೆ ಬಂದ.

'ನಂಗೆ ಎಲ್ಲವೂ ಇದೆ. ಆದ್ರೆ ಏನೂ ಇಲ್ಲ. ಖಾಲಿ ಖಾಲಿ ಅನ್ನಿಸ್ತಿದೆ'ಎಂದು ಅರುಂಧತಿ ಇತ್ತೀಚೆಗೆ ಕ್ಯಾಷುಯಲ್ಲಾಗಿ ಹೇಳಿದ್ದು ನೆನಪಾಯಿತು. ನಾನು ಒಂಟಿಯಾಗಿ ಉಳಕೊಂಡುಬಿಡ್ತೀನಿ ಅನ್ನಿಸ್ತಿದೆ. ಇನ್ನೂ ಇಪ್ಪತ್ತೆಂಟು ವರ್ಷ ಸರ್ವೀಸ್ ಇದೆ. ನಾನೂ ಒಂದು ಅಪಾರ್ಟ್‌ಮೆಂಟ್‌ನಲ್ಲಿ ಮನೆ ತಗೊಂಡಿದ್ದೀನಿ. ನಮ್ಮಿಬ್ಬರಿಗೂ ಕಾರುಗಳಿವೆ. ಒಂದು ಮಗು ಮಾಡಿಕೊಳ್ಳೋಕೆ ಇದು ರೈಟ್ ಟೈಮ್ ಅಂದರೆ ಅಭಿ ಬೇಡ ಅಂತಾನೆ! ಅವನ ಮನಸ್ಸಿನಲ್ಲಿ ಏನಿದೆಯೋ ಗೊತ್ತೇ ಆಗ್ತಿಲ್ಲ. ಅವನು ನನ್ನಿಂದ ಏನೋ ಮುಚ್ಚಿಡ್ತಿದ್ದಾನೆ ಅನ್ನಿಸ್ತಿದೆ. ನನ್ನ ಜತೆ ಇರೋಕೆ ಅವನಿಗೆ ಬೋರ್ ಅನ್ನಿಸ್ತಿರಬಹುದು. ಅವನು ಸರಿ ಇಲ್ಲ ಅಂತ ನಂಗೂ ಅನ್ನಿಸೋಕೆ ಶುರುವಾಗಿದೆ' ಎಂದು ಹೇಳಿದ್ದು ನೆನಪಾಯಿತು. ಅರುಂಧತಿ ಹೇಳಿದ್ದು ನಿಜವೇ? ಅಭಿರಾಮ್‌ಗೆ ಸುದೇಷ್ಣ ಜತೆ ಅಫೇರ್ ಇರಬಹುದೇ? ಅವನು ಅವಳ ಜತೆ ಪದೇ ಪದೇ ಪೋನಲ್ಲಿ ಮಾತಾಡೋದನ್ನು ಇವಳು ಅಫೇರ್ ಅಂತ ತಿಳ್ಕಂಡಿರಬಹುದೇ? 'ಒಂದೇ ಸಲ ನೀನು ಕನ್‌ಕ್ಲೂಷನ್‌ಗೆ ಬರಬೇಡ, ನೆಮ್ಮದಿ ಕಳಕೊಳ್ತೀಯ' ಎಂದು ಅವಳಿಗೆ ಹೇಳಬೇಕು ಅನ್ನಿಸಿತು.

'ನಿಂಗೆ ಪಿಎಚ್‌.ಡಿ ಸಿಕ್ಕರೆ ಯಾವುದಾದರೂ ಯೂನಿವರ್ಸಿಟಿ ಸೇರಿಕೊಳ್ತೀಯ. ನಿಂಗೆ ಕೆಲಸ ಕೊಡಿಸೋಕೆ ನಿನ್ನ ಪ್ರೊಫೆಸರ್ ಇದ್ದಾರೆ. ಆದರೆ ನಂಗೆ ಯಾರಿದ್ದಾರೆ? ಯೂನಿವರ್ಸಿಟಿಯಲ್ಲಿ ಅಲ್ಲದಿದ್ದರೆ ಬೇರೆ ಎಲ್ಲಾದರೂ ನಿಂಗೆ ಕೆಲಸ ಸಿಗುತ್ತೆ. ನಂಗೆ ಕೆಲಸ ಕೊಡಿಸೋರೇ ಇಲ್ಲ. ಇರೋ ಕೆಲಸ ಬಿಟ್ಟರೆ ಇನ್ನೊಂದು ಸಿಗುತ್ತೆ ಅನ್ನೋ ಕಾನ್‌ಫಿಡೆನ್ಸ್ ಇಲ್ಲ' ಎಂದು ಅರುಂಧತಿ ಹೇಳಿದ್ದು ನೆನಪಾಯಿತು.

'ಟ್ರಾನ್ಸ್‌ಫರ್ ತಗೊಂಡು ಬೇರೆಲ್ಲಿಗಾದರೂ ಹೋಗಬೇಕು ಅನ್ನಿಸ್ತಿದೆ. ಅಪ್ಪ,ಅಮ್ಮನ್ನ ಊರಿಂದ ಕರೆಸಿಕೊಂಡು ಅವರನ್ನು ನನ್ನ ಜತೆಯಲ್ಲೇ ಇಟ್ಟುಕೊಂಡು ಅವರನ್ನು ನೋಡಿಕೊಳ್ಳಬೇಕು ಅನ್ನಿಸಿ ಕಳೆದ ವಾರ ಅಮ್ಮನಿಗೆ ಫೋನ್ ಮಾಡಿ ಸೂಕ್ಷ್ಮವಾಗಿ ವಿಷಯ ತಿಳಿಸಿದೆ.'

'ಸುಮ್ಮನೆ ಗಂಡನ ಜತೆ ಸಂಸಾರ ಮಾಡೋದು ಬಿಟ್ಟು ಏನು ಮಾಡೋಕೆ ಹೊರಟಿದ್ದೀಯೇ? ಬೇರೆ ಊರಿಗೆ ಹೋಗೋ ಮಾತು ಹೇಳಬೇಡ' ಅಂತ ಗದರಿದರು. ಗಂಡನ ಜತೆ ಜಗಳ ಗಿಗಳ ಮಾಡಿಕೊಂಡೆಯಾ ಎಂದು ಕೇಳಿದರು. ನಾನು ಏನೂ ಹೇಳಲಿಲ್ಲ. ಒಂಟಿಯಾಗಿ ಇರೋ ಹೆಂಗಸರಿಗೆ ನಮ್ಮ ಸಮಾಜ ಗೌರವ ಕೊಡಲ್ಲವಂತೆ! ನಮ್ಮ ಧರ್ಮದಲ್ಲಿ ಮದುವೆ ಅನ್ನೋದು ಒಂದೇ ಸಲವಂತೆ. ಸಂಸಾರ ಅಂದ ಮೇಲೆ ನೂರು ಮಾತು ಬರ್ತವೆ. ನೀನೇ ಹೊಂದಿಕೊಂಡು ಹೋಗಬೇಕು. ಒಂದು ಮಗು